ಗಳನ್ನು ಮಾಡಿದ್ದೇವೆ ಅದಕ್ಕೆ ಅವರಿಗೆ ಇರುವಷ್ಟು ಸಂಬಳ ಕೊಡುತ್ತೀರಾ ಎಂದು ಕೇಳಿದ್ದಾರೆ, ಇದನ್ನು ನಾವು ನಬಾರ್ಡ್ ಸಂಸ್ಥೆ ಜೊತೆಯಲ್ಲಿ ಮಾತನಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ಸಹಕಾರ ಸಂಘಗಳನ್ನು 4 ವಿಧವಾಗಿ ವಿಂಗಡಿಸಿ ಸಂಬಳದ ಸ್ಕೇಲನ್ನು ನಿಗದಿ ಮಾಡಿದ್ದೇವೆ ಎಂದು ಹೇಳಿದ್ದೀರಿ, ಆ ಸ್ಕೇಲ್ ಏನು, ಅದನ್ನು ಯಾವಾಗ ಜಾರಿಗೆ ಕೊಡುತ್ತೀರಿ ?

ಶ್ರೀ ಆರ್.ಎಲ್. ಜಾಲಪ್ಪ.—ಆ ಸ್ಕೇಲ್ ವಿವರ ಇಲ್ಲಿದೆ, ಬೇಕಾದರೆ ಕಳಿಸುತ್ತೇನೆ. ಇದನ್ನು 23-6-1983 ರಿಂದ ಜಾರಿಗೆ ಕೊಟ್ಟಿದ್ದೇವೆ.

ಶ್ರೀ ವಿ. ಧನಂಜಯ ಕುಮಾರ್.—ಸೊಸೈಟಿಗಳಲ್ಲಿ ಪ್ರಾಥಮಿಕ ಸಹಕಾರಿ ಬ್ಯಾಂಕುಗಳವರು, ಕಾಮನ್ ಕೇಡರ್ ಅಥಾರಿಟಿಗೆ ಒಪ್ಪಿಕೊಂಡಂಥ ಸದಸ್ಯರು, ಅದರ ವ್ಯಾಪ್ತಿಯೊಳಗೆ ಬರುವಂಥ ನೌಕರರಿಗೆ ಸಮನಾದಂಥ ವೇತನವನ್ನು ಕೊಡಿಸುವುದಕ್ಕೆ ಸರ್ಕಾರ ಏರ್ಪಾಟು ಮಾಡುತ್ತದೆಯೇ ?

ಶ್ರೀ ಆರ್.ಎಲ್. ಜಾಲಪ್ಪ.—ಈಗಾಗಲೇ ನಿಗದಿ ಮಾಡಿದ್ದೇವೆ.

ವಿಷಯ :—ಕಳ್ಳಂಬೆಳ್ಳ ವಿಧಾನಸಭಾ ಕ್ಷೇತ್ರದ ಹಳ್ಳಿಗಳಿಗೆ ವಿದ್ಯುತ್ ಪೂರೈಕೆ

ಪ್ರ. 164(9) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ವಿದ್ಯುತ್ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಕಳ್ಳಂಬೆಳ್ಳ ವಿಧಾನಸಭಾ ಕ್ಷೇತ್ರದಲ್ಲಿ ಇನ್ನೂ ವಿದ್ಯುದ್ದೀಕರಣ ಆಗಬೇಕಾಗಿರುವ ಹಳ್ಳಿಗಳ ಸಂಖ್ಯೆ ಎಷ್ಟು ? ಹೋಬಳಿವಾರು ವಿವರಗಳು ಮತ್ತು ಹಂತಗಳು ;

ಆ. ಈ ಹಳ್ಳಿಗಳನ್ನು ವಿದ್ಯುದ್ದೀಕರಿಸಲು ಸರ್ಕಾರ ಶೀಘ್ರ ಕ್ರಮಗಳನ್ನು ತೆಗೆದುಕೊಳ್ಳುವುದೇ ?

ಶ್ರೀ ಜೆ.ಹೆಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು) :—

ಅ. ದಿನಾಂಕ 30-6-83ರವರೆಗೆ ವಿದ್ಯುದ್ದೀಕರಣ ಆಗದಿರುವ ಹಳ್ಳಿಗಳ ವಿವರಗಳು :—

ಹೋಬಳಿ ಹೆಸರು		ವಿದ್ಯುತ್ ಸರಬರಾಜು ಆಗದಿರುವ ಹಳ್ಳಿಗಳ ಸಂಖ್ಯೆ :
1. ಕಳ್ಳಂಬೆಳ್ಳ	....	14
2. ಬುಕ್ಕಾಪಟ್ಟಣ	....	18
3. ಹಾಗಲವಾಡಿ	....	18
4. ಹುಳಿಯಾರು	....	15
	ಒಟ್ಟು	65

ಆ. ಮುಂದಿನ 3-4 ವರ್ಷಗಳಲ್ಲಿ ಉಳಿದೆಲ್ಲಾ ಹಳ್ಳಿಗಳಿಗೆ ವಿದ್ಯುತ್ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಗಂಗಣ್ಣ.—ಉಳಿದ ಕ್ಷೇತ್ರಗಳಿಗೆ ಹೋಲಿಸಿದರೆ ನನ್ನ ಕ್ಷೇತ್ರದಲ್ಲಿ ಕೆಲಸಮಾಡದೇ ಇರುವಂಥ ಹಳ್ಳಿಗಳ ಸಂಖ್ಯೆ ಜಾಸ್ತಿ ಇದೆ. ಇದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ವಿಧಾನಸಭಾ ಕ್ಷೇತ್ರದಲ್ಲಿರತಕ್ಕ ಹಳ್ಳಿಗಳ ಸಂಖ್ಯೆ 192, ಅದರಲ್ಲಿ 120 ಹಳ್ಳಿಗಳಿಗೆ ಈಗಾಗಲೇ ವಿದ್ಯುದ್ದೀಕರಣವಾಗಿದೆ. ದಿನಾಂಕ 30-6-1983 ರಷ್ಟು ಹೊತ್ತಿಗೆ 127 ಹಳ್ಳಿಗಳಿಗೆ ಆಗಿದೆ. ಉಳಿದ 65 ಹಳ್ಳಿಗಳಲ್ಲಿ 21 ಹಳ್ಳಿಗಳಿಗೆ ಈ ಆರ್ಥಿಕ ವರ್ಷದಲ್ಲಿ ಮುಗಿಸಿಕೊಡತಕ್ಕ ಅಂದಾಜಾಗಿದೆ. ಇನ್ನು ಉಳಿದಿರತಕ್ಕ 42 ಹಳ್ಳಿಗಳಿಗೆ ಇನ್ನು 3-4 ವರ್ಷಗಳಲ್ಲಿ ವಿದ್ಯುದ್ದೀಕರಣ ಆಗುತ್ತದೆ.

ವಿಷಯ :— ಹಿರಣ್ಯಕೇಶಿ ಸಹಕಾರಿ ಸಾರಿಗೆ ಸಂಘ ನಿಯಮಿತ, ಸಂಕೇಶ್ವರ.

ಪ್ರ. 165 (1) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಹಿರಣ್ಯಕೇಶಿ ಕೋ ಆಪರೇಟಿವ್ ಟ್ರಾನ್ಸ್‌ಪೋರ್ಟ್ ಸೊಸೈಟಿ ಲಿಮಿಟೆಡ್, ಸಂಕೇಶ್ವರ ಈ ಸಂಸ್ಥೆಗೆ ಕಳೆದ 5 ವರ್ಷಗಳಲ್ಲಿ ಪ್ರತಿ ವರ್ಷ ಆದಂತ ಲಾಭದ ಮೊತ್ತ ಎಷ್ಟು ;

ಆ. 5 ವರ್ಷಗಳಲ್ಲಿ ಆದ ಲಾಭದ ಹಂಚಿಕೆಯ ವಿವರಗಳನ್ನು ಒದಗಿಸುವುದು ;

ಇ. 5 ವರ್ಷಗಳಲ್ಲಿ ಆದ ಲಾಭದ ಹಣದಲ್ಲಿ ಸಂಚಾಲಕ ಮಂಡಲಿಯವರು ಸ್ವಂತಕ್ಕಾಗಿ ತೆಗೆದುಕೊಂಡಂತ ಹಣವಾಗಲಿ ಅಥವಾ ಅಲ್ಮಾರಾಗಳಾಗಲಿ ತೆಗೆದುಕೊಂಡದ್ದು ಸರಕಾರದ ಗಮನಕ್ಕೆ ಬಂದಿದೆಯೆ ;

ಈ. ದುರುಪಯೋಗ ಆದ ಹಣದ ವಸೂಲಿ ಬಗ್ಗೆ ಸರಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು) :—

ಅ. ಕಳೆದ 5 ವರ್ಷಗಳಲ್ಲಿ ಈ ಸಂಘವು ಗಳಿಸಿದ ಲಾಭವು ಈ ಕೆಳಕಂಡಂತ ಇದೆ.

1977–78	ರೂ. 29480—42
1978–79	ರೂ. 43460—25
1979–80	ರೂ. 64647—92
1980–81	ರೂ. 43229—63
1981–82	ರೂ. 58245—14

ಆ. ಲಾಭದ ಹಂಚಿಕೆಯ ವಿತರಣೆ ಈ ಕೆಳಕಂಡಂತಿದೆ.

		1977–78 ಮತ್ತು 1978–79	1979–80
1.	ಕಾಯ್ದಿಟ್ಟ ನಿಧಿ ಲೇಕಡ 25	13,872—32	10,957—40
2.	ಡಿವಿಡೆಂಡ್ ಲೇಕಡ 5	21,125—00	9,487—50
3.	ಬಿಲ್ಡಿಂಗ್ ಫಂಡ್ ಲೇ. 10	4,161—70	3,287—22
4.	ಬ್ಯಾಡಡೆಟ್	2,080—85	3 287—22
5.	ಸಿಂಕಿಂಗ್ ಫಂಡ್ ಲೇ. 5	2,080—85	1,643—61
6.	ಚಾರಿಟಿ ಫಂಡ್ ಲೇ. 5	1,040—85	1.643—61
7.	ಕೋ ಆಪರೇಟಿನ್ ಎಜುಕೇಷನ್ ಫಂಡ್	832—38	657—44
8.	ಜೋನಸ್ ಫಂಡ್	9,980—00	5,710—00
9.	ಉಳಿದಿದ್ದು ಕಾಯ್ದಿಟ್ಟ ನಿಧಿಗೆ.	315—39	2,155—63
10.	ಇನ್‌ಕಮ್ ಟ್ಯಾಕ್ಸ್ ಪ್ರಾವಿಷ್	—	5,000—00
	ಒಟ್ಟು ರೂ.	55,489—31	43,829—63

1980—81, 1981—82 ಮತ್ತು 1982—83ನೇ ಸಾಲಿನ ವಾರ್ಷಿಕ ಮಹಾ ಸಭೆಗಳು ಜರುಗದಿದ್ದರಿಂದ ಈ ವರ್ಷಗಳ ಲಾಭದ ಹಂಚಿಕೆ ಆಗಿರುವುದಿಲ್ಲ.

ಇ. ಕಳೆದ 5 ವರ್ಷಗಳಲ್ಲಿ ಆದ ಲಾಭದ ಹಣದಲ್ಲಿ ಈ ಬಗ್ಗೆ ಖರ್ಚು ಹಾಕಿರುವುದಿಲ್ಲ. ಆದರೆ ಸಂಘವು 1978–79ರಲ್ಲಿ ದೇಣಿಗೆ (ಡೊನೇಷನ್) ರೂಪದಲ್ಲಿ ರೂ. 17,515–24 ಹಾಗೂ 1980—81ರಲ್ಲಿ ರೂ. 6,191–44 ಗಳನ್ನು ಸಂಗ್ರಹಿಸಿ ಒಟ್ಟು ಮೊಬಲಗು ರೂ. 23,706—68 ಗಳಲ್ಲಿ ರೂ. 16,842–95 ಗಳನ್ನು 1900–81ನೇ ಸಾಲಿನಲ್ಲಿ ಸಂಘದ 9 ಜನ ಡೈರೆಕ್ಟರುಗಳಿಗೆ ಕಬ್ಬಿಣದ ಅಲೆಮೀರಾಗಳನ್ನು ಕೊಡುಗೆ ರೂಪದಲ್ಲಿ ಕೊಟ್ಟು "ಡೊನೇಷನ್ ಪೇಯಿಬಲ್" ಎಂಬ ಖಾತೆಯಲ್ಲಿ ಖರ್ಚು ಹಾಕಿರುತ್ತಾರೆ.

ಈ. ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಬೆಳಗಾಂ ಇವರು ಸಹಕಾರ ಸಂಘಗಳ ಕಾಯಿದೆ ಕಲಂ 68ರ ಪ್ರಕಾರ ಕ್ರಮ ಕೈಗೊಳ್ಳಲು ಆರ್ಡರ್ ಮಾಡಿರುತ್ತಾರೆ.

ಶ್ರೀ ಮಲ್ಲಾಗೌಡ ಎಸ್. ಪಾಟೀಲ.—ಈ ಉತ್ತರ ನೋಡಿದರೆ ಮಾನ್ಯ ಸಹಕಾರ ಮಂತ್ರಿಗಳೂ ಕೂಡ ಇದನ್ನು ಗಮನಿಸಿದ ಹಾಗೆ ಕಾಣುವುದಿಲ್ಲ. (ಆ) ಪ್ರಶ್ನೆಗೆ ಉತ್ತರದಲ್ಲಿ 1980–81, 1981–82 ಮತ್ತು 1982–83ನೇ ಸಾಲಿನ ವಾರ್ಷಿಕ ಮಹಾ ಸಭೆಗಳು ಜರುಗದಿದ್ದುದರಿಂದ ಈ ವರ್ಷಗಳ ಲಾಭದ ಹಂಚಿಕೆಯಾಗಿರುವುದಿಲ್ಲ ಎಂದು ಹೇಳಿದ್ದೀರಿ. (ಇ) ಪ್ರಶ್ನೆಗೆ ಉತ್ತರದಲ್ಲಿ 1980–81 ನೇ ಸಾಲಿನಲ್ಲಿ ಸಂಘದ 9 ಜನ ಡೈರೆಕ್ಟರುಗಳಿಗೆ ಕಬ್ಬಿಣದ ಅಲಮೇರಾಗಳನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ. ವಾರ್ಷಿಕ ಮಹಾಸಭೆಗಳು ಆಗದೆ ಲಾಭ ಹಂಚಿಕೆಯಾಗದೇ ಇರುವಾಗ ಇವರು ಅಲಮೇರಾಗಳನ್ನು ಹೇಗೆ ತೆಗೆದುಕೊಂಡರು ? ಮೊದಲನೇ ಪ್ರಶ್ನೆಗೆ ಹಂಚಿಕೆಯಾಗಿಲ್ಲ ಎಂದು ಹೇಳಿದ್ದೀರಿ, ಆಮೇಲೆ ಅಲೆಮೇರಾಗಳನ್ನು ತೆಗೆದು ಕೊಂಡಿದ್ದಾರೆ ಎಂದು ಹೇಳಿದ್ದೀರಿ. ವಾರ್ಷಿಕ ಮಹಾ ಸಭೆಗಳು ಆಗದೇ ಇದ್ದಾಗ, ಲಾಭದ ಹಂಚಿಕೆಯಾಗದೇ ಇದ್ದಾಗ, ಇವರು ಹೇಗೆ ತೆಗೆದುಕೊಂಡರು. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? 3 ವಾರ್ಷಿಕ ಸಭೆಗಳು ಆಗಿಲ್ಲ, ಈ ರೀತಿ ಅಲ್ಲಿ ಹಗಲು ದರೋಡೆ ಮಾಡುತ್ತಿದ್ದಾರೆ, ಇವರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಪಾಟೀಲರಿಗೆ ಅಲಮೇರಾಗಳನ್ನು ಹಂಚಿರುವುದು ಮಾತ್ರ ಗೊತ್ತಿರುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇದಕ್ಕಿಂತ ಹೆಚ್ಚು ಗೊತ್ತಿದೆ. ನಿಷ್ಠೂರವಾಗಿ ಕ್ರಮ ತೆಗೆದುಕೊಳ್ಳುವುದಾದರೆ ನಾನು ಸಂಪೂರ್ಣವಾದ ಮಾಹಿತಿ ಕೊಡುತ್ತೇನೆ. ನೀವು ಕಾರ್ಯಕ್ರಮ ತೆಗೆದು ಕೊಳ್ಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಪಾಟೀಲರು ಇಷ್ಟು ಬೇಗ ಕನ್‌ಕ್ಲೂಷನ್‌ಗೆ ಬರುತ್ತಾರೆಂದು ಗೊತ್ತಾಗಲಿಲ್ಲ. ಅವರು ಬರೀ ಅಲವೇರಾ ತೆಗೆದುಕೊಂಡಿರುವುದು ಮಾತ್ರವಲ್ಲ, 77,964 ರೂಪಾಯಿಗಳ ಮಿಸ್ ಅಪ್ರೊಪ್ರಿಯೇಷನ್ ಆಗಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಈ ಮಧ್ಯೆ ಅಲ್ಲಿಯ ಸೆಕ್ರೆಟರಿ ಸತ್ತು ಹೋದರು. ಆಮೇಲೆ ಆ ಸಂಸ್ಥೆಯನ್ನು ಚಾರ್ಟರ್ಡ್ ಅಕೌಂಟ್ಸ್‌ಗೆ ಕೊಟ್ಟು ಆಡಿಟ್ ಮಾಡಿಸಿದ್ದಾರೆ. ಆದರ ಪ್ರಕಾರ 77,984 ರೂಪಾಯಿಗಳ ಮಿಸಅಪ್ರೊಪ್ರಿಯೇಷನ್ ಆಗಿದೆ. ನಮ್ಮವರೂ ಆಡಿಟ್‌ಗೆ ಕಳಿಸಿದ್ದಾರೆ. ರೂಲ್ 64ರ ಪ್ರಕಾರ ಎನ್‌ಕ್ವೈರಿಗೆ ಹಾಕಿ 68ನೇ ಕಾಯಿದೆ ಯನ್ವಯ ಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ. 8–10 ದಿವಸ ಆದಮೇಲೆ ಹೇಳಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಾನು ಪ್ರಶ್ನೆ ಹಾಕಿದ ಮೇಲೆ ಅವರ್ ಗಮನಕ್ಕೆ ಬಂದಿದೆಯೇ ಅಥವಾ ಅದಕ್ಕೆ ಮೊದಲು ಸರ್ಕಾರದ ಗಮನಕ್ಕೆ ಈ ವಿಷಯ ಬಂದಿದೆಯೆ? ಮೊದಲೇ ಅವರ ಗಮನಕ್ಕೆ ಬಂದಿದ್ದರೆ ಈ ಸರ್ಕಾರ ಬಂದು 8 ತಿಂಗಳಾಯಿತು, ಇದರ ಬಗ್ಗೆ ಏಕೆ ಕ್ರಮತೆ ಗೆದುಕೊಳ್ಳಲಿಲ್ಲ. ನಾನು ಈ ಪ್ರಶ್ನೆ ಹಾಕಿದ ಮೇಲೆ ಈ ರೀತಿ ಆಗಬಾರದು. ಆದುದರಿಂದ ಸರ್ಕಾರದವರು ಇದರ ಬಗ್ಗೆ ಕ್ರಮ ತೆಗೆದುಕೊಂಡು ಆ ಸಂಸ್ಥೆಯ ಬೇರ್ಡನ್ನು ವಶಪಡಿಸಿಕೊಳ್ಳುತ್ತೀರಾ ?- ಮತ್ತು ಡೆರೆಕ್ಟರು ಗಳನ್ನು ಅಮಾನತ್ತಿನಲ್ಲಿ ಇಡಬಾರದಾಗಿತ್ತು.

ಶ್ರೀ ಆರ್. ಎಲ್. ಜಾಲಪ್ಪ.—ಕರ್ನಾಟಕ ರಾಜ್ಯದಲ್ಲಿ 22 ಸಾವಿರ ಸೊಸೈಟಿಗಳಿವೆ. ಪ್ರತಿ ಯೊಂದರ ವಿಷಯವೂ ನಮ್ಮ ಗಮನಕ್ಕೆ ಬರುವುದು ಕಷ್ಟವಾಗುತ್ತದೆ. 1980-81 ರಲ್ಲಿ ಇದು ಆಗಿತ್ತು. ಮಾನ್ಯ ಸದಸ್ಯರಿಗೆ ಮೊದಲೇ ಗೊತ್ತಿತ್ತು ಎಂದು ಕಾಣುತ್ತದೆ. ನನ್ನ ಗಮನಕ್ಕೆ ಬಂದ ಮೇಲೆ, ಕಾಯಿದೆ 64ರ ಪ್ರಕಾರ ಎನ್‌ಕ್ವೈರಿಮಾಡಿ ಎಂದು ಹೇಳಿದ್ದೇನೆ. ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ.—ತಿಪಟೂರು ತಾಲ್ಲೂಕಿನಲ್ಲಿ ಕ್ಷಾಮ ಪರಿಸ್ಥಿತಿ

ಪ್ರ. 166 (7) ಶ್ರೀ ಎಸ್. ವಿ. ಗಂಗಾಧರಪ್ಪ (ತಿಪಟೂರು) ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:—

ಅ. ತಿಪಟೂರು ತಾಲ್ಲೂಕಿನಲ್ಲಿ ಕ್ಷಾಮ ಪರಿಸ್ಥಿತಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ. ಇದರ ಬಗ್ಗೆ ಸರ್ಕಾರದವರು ತೆಗೆದುಕೊಂಡ ಪರಿಣಾಮಕಾರಿ ಯೋಜನೆಗಳೇನು ?

ಇ. ತಿಪಟೂರು ತಾಲ್ಲೂಕಿನಲ್ಲಿ ತೆಂಗಿನ ಮರ, ಅಡಿಕೆ ಮರ ಮಳೆಯಿಲ್ಲದೆ ಒಣಗಿ ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ. ಈ ದಿಶೆಯಲ್ಲಿ ತೊಂದರೆಗೊಳಗಾದ ಜನರಿಗೆ ಪರಿಹಾರ ಕೊಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಆರ್. ಎಲ್. ಜಾಲಪ್ಪ.—(ಕಂದಾಯ ಸಚಿವರು)

ಅ. ಸರ್ಕಾರದ ಗಮನಕ್ಕೆ ಬಂದಿದೆ.

ಆ. ಈ ತಾಲ್ಲೂಕಿನಲ್ಲಿ ವಿವಿಧ ಇಲಾಖೆಗಳು ಅಂದರೆ, ಲೋಕೋಪಯೋಗಿ, ತಾಲ್ಲೂಕ್ ಬೋರ್ಡ್, ಅರಣ್ಯ ಭೂಸಾರ ಸಂರಕ್ಷಣಾ ಮತ್ತು ತೋಟಗಾರಿಕೆ ಮುಖಾಂತರ ತೊಂದರೆ ಗೊಳಗಾದ ಜನರಿಗೆ ಒಟ್ಟು 259 ಅಭಾವ ಪರಿಹಾರ ಕಾಮಗಾರಿ ಕೆಲಸಗಳನ್ನು ದಿನಗೂಲಿ ಯಂತೆ ಒದಗಿಸಲಾಗಿದೆ. ಇದಕ್ಕೆ ಇಲ್ಲಿಯ ತನಕ ರೂ. 790932–00 ಗಳನ್ನು ಖರ್ಚು ಮಾಡಲಾಗಿದೆ. ಕುಡಿಯುವ ನೀರಿಲ್ಲದ ಹಳ್ಳಿಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡಲು 2456–00 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅದ್ಯತೆ ಆಧಾರದ ಮೇಲೆ ಎಲ್ಲಿ ನೀರಿನ ಅವಶ್ಯಕತೆ ಇದೆಯೋ ಅಲ್ಲಿ 152 ಪಾಯಿಂಟ್‌ಗಳನ್ನು ಗುರುತಿಸಿ ಅದರಲ್ಲಿ 1982–83ರ ಅವಧಿಯಲ್ಲಿ 69 ಕೊಳವೆ ಭಾವಿಗಳನ್ನು ಕೊರೆಯಲಾಯಿತು. ಇದಕ್ಕಾಗಿ 828000–00 ರೂಪಾಯಿಗಳನ್ನು ಖರ್ಚು ಮಾಡಲಾಗಿರುತ್ತೆ. ಮತ್ತು 1883–84 ನೇ ಸಾಲಿನಲ್ಲಿ 71 ಕೊಳವೆ ಭಾವಿಗಳನ್ನು ಕೊರೆಯಲಾಗಿದೆ. ಇದಕ್ಕಾಗಿ 85200–00 ರೂಪಾಯಿಗಳನ್ನು ಖರ್ಚು ಮಾಡಲಾಗಿರುತ್ತೆ. ಪಕ್ಕದ ಜಿಲ್ಲೆಗಳಿಂದ 55 ಲಾರಿ ಲೋಡು ಹುಲ್ಲನ್ನು ತಂದು ಹಂಚಲಾಗಿದೆ. ಇಲ್ಲಿಯವರೆಗೆ ಒಟ್ಟು 13500–00 ರೂಪಾಯಿ ಗಳನ್ನು ಸಾಗಾಣಿಕೆಯ ಸಲುವಾಗಿ ಖರ್ಚು ಮಾಡಲಾಗಿರುತ್ತೆ. 1982–83ನೇ ಸಾಲಿನ ಭೂಕಂದಾಯ ರೂ. 163442ಗ36 ಗಳ ವಸೂಲಿಯನ್ನು ಸರ್ಕಾರವು ಮಾಫಿ ಮಾಡಿರುತ್ತೆ.